ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ ನ್ಯಾಯಾಲಯ.

ಸ್ಥಳಃ ಸವಣೂರ.

**MVC No. 374/2022**

ಪಿಡಬ್ಲ್ಯು -2

| | | |
|---|---|---|
| ಸಾಕ್ಷಿದಾರರ ಹೆಸರು | :- | ಡಾಃ ಜ್ಯೋತಿ ಬೆಂಡಿಗೇರಿ |
| ವಯಸ್ಸು | :- | 43 ವರ್ಷಗಳು |
| ಉದ್ಯೋಗ | :- | ವೈದ್ಯಾಧಿಕಾರಿಗಳು |
| ವಾಸಸ್ಥಳ | :- | ಕೀಮ್ಸ್ ಹುಬ್ಬಳ್ಳಿ |

ದಿನಾಂಕಃ 29-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ-** ಅರ್ಜಿದಾರರ ಪರ ಶ್ರೀ. ಬಿ ಸಿ ಕೆ ವಕೀಲರಿಂದ.

ನಾನು ಕೀಮ್ಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ತುರ್ತು ಚಿಕಿತ್ಸಾ ಘಟಕದಲ್ಲಿ ವೈದ್ಯಾಧಿಕಾರಿಯಾಗಿ ಜುಲೈ 2017 ರಿಂದ ಮೇ 2021 ರವರೆಗೆ ಸೇವೆ ಸಲ್ಲಿಸಿದ್ದು ಇರುತ್ತದೆ.

ನನಗೆ ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ಸಮನ್ಸ್ ಬಂದಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 11-05-2021 ರಂದು ಒಬ್ಬ ಈರವ್ವ ಹೆಚ್ ಗೊರಗುಂಟಿ ಇವರನ್ನು ಸವಣೂರಿನ ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕಳುಹಿಸಲಾಗಿದ್ದು ಆಗ ನಾನು ಅದೇ ದಿವಸ 05.23 ಗಂಟೆಗೆ ಅವರನ್ನು ಚಿಕಿತ್ಸೆಗೆ ಒಳಪಡಿಸಿರುತ್ತೇನೆ. ಅವರಿಗೆ ತಲೆಗೆ ರಕ್ತದ ಗಾಯ ಆಗಿತ್ತು. ಆಗ ನಾನು ಸರ್ಜರಿ ಇವರಿಗೆ ಅವರನ್ನು ಕಳುಹಿಸಿಕೊಟ್ಟಿದ್ದು ಅವರು ಪರೀಕ್ಷಿಸಿ ನ್ಯೂರೋ ಸರ್ಜನ್ ಇವರಲ್ಲಿ ಚಿಕಿತ್ಸೆಗೆ ಕಳುಹಿಸಿರುತ್ತಾರೆ. ಅಲ್ಲಿ ಅವರು ದಿನಾಂಕ 11-05-2021 ರಿಂದ 14-05-2021 ರವರೆಗೆ ಚಿಕಿತ್ಸೆ ಪಡೆದುಕೊಂಡಿದ್ದು ಅವರು ದಿನಾಂಕ 14-05-2021 ರಂದು ಬೆಳಿಗ್ಗೆ 06.30 ಗಂಟೆಗೆ ತೀರಿಕೊಂಡಿರುತ್ತಾರೆ. ತಾಲೂಕು ಆಸ್ಪತ್ರೆ, ಸವಣೂರು ಇವರ ಹೊರ ರೋಗಿಗಳ ವಿಭಾಗದ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-19 ಎಂದು

ಗುರುತಿಸಲಾಯಿತು. ನಮ್ಮ ಆಸ್ಪತ್ರೆಯ ಎಮ್‌ಎಲ್‌ಸಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-20 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ವ್ಯಕ್ತಿಯು ನಮ್ಮ ಆಸ್ಪತ್ರೆಗೆ ಬಂದಾಗ ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ, ನಮ್ಮ ಮಾತುಗಳಿಗೆ ಸ್ಪಂದನೆ ನೀಡುತ್ತಿರಲಿಲ್ಲ. ನಿಪಿ-19 ರಲ್ಲಿ ಆರ್ ಟಿ ಎ ಸಮಯ 03.15 ದಿನಾಂಕ 11-05-2021 ಎಂದು ನಮೂದಿಸಲಾಗಿರುತ್ತದೆ. ಸದರಿ ವರದಿಯ ಆಧಾರದ ಮೇಲಿಂದ ನಿಪಿ-20 ರಲ್ಲಿ ನಾವು ಆರ್ ಟಿ ಎ ಎಂದು ನಮೂದು ಮಾಡಿಕೊಂಡಿರುತ್ತೇವೆ. ತಲೆಗೆ ಗಾಯ ಆದಲ್ಲಿ ಎಮ್ ಎಲ್ ಸಿ ಮಾಡಿಕೊಳ್ಳಬೇಕಾಗುತ್ತದೆ.

<u>**ಪಾಟೀಸವಾಲುಃ** ಎದುರುದಾರ ನಂ.**2** ಪರ ಶ್ರೀ. ವಿ ಎಸ್ ಎ ವಕೀಲರಿಂದ.</u>

ನಿಪಿ-19 ರ ಆಧಾರದ ಮೇಲಿಂದ ನಾವು ಆರ್ ಟಿ ಎ ಎಂದು ಮಾಡಿಕೊಂಡಿಲ್ಲ ಎಂದರೆ ಸರಿ. ನಿಪಿ-20 ರಲ್ಲಿ ಆರ್ ಟಿ ಎ ದ್ವಿಚಕ್ರ ವಾಹನದಿಂದ ಬಿದ್ದಿದ್ದು ಎಂಬುವುದನ್ನು ನಾನು ಅವರ ಮಗ ಮಾರ್ತಾಂಡ ಇವರ ಹೇಳಿಕೆಯ ಮೇರೆಗೆ ಬರೆದುಕೊಂಡಿರುತ್ತೇನೆ. ನಿಪಿ-20 ಕ್ಕೆ ಮಾರ್ತಾಂಡ ಇವರ ಸಹಿ ಪಡೆದುಕೊಂಡಿಲ್ಲ. ಸಾಮಾನ್ಯವಾಗಿ ಎಮ್‌ಎಲ್ ಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಗೇ ನಮಗೆ ಮಾಹಿತಿ ಕೊಟ್ಟವರ ಸಹಿಯನ್ನು ಎಮ್‌ಎಲ್‌ಸಿ ದಾಖಲೆಗೆ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಎಮ್‌ಎಲ್ ಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತ್ರ ನಾವು ರಜಿಸ್ಟರ್ ಇಟ್ಟಿರುತ್ತೇವೆ, ನಿಲ್ ಎಮ್ ಎಲ್ ಸಿ ಪ್ರಕರಣಕ್ಕೆ ಹಾಗೇ ಯಾವುದೇ ರಜಿಸ್ಟರ್ ಇಡುವುದಿಲ್ಲ. ನಿಪಿ-20 ಎಮ್‌ಎಲ್ ಸಿ ರಜಿಸ್ಟರ್ ದ ದೃಢೀಕೃತ ನಕಲು ಇರುತ್ತದೆ. ಎಮ್‌ಎಲ್ ಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಪೊಲೀಸರಿಗೆ ನಾವುಗಳು ಮಾಹಿತಿ ಒದಗಿಸುತ್ತೇವೆ ಎಂದರೆ ಸರಿ. ಹಾಗೇ ಪೊಲೀಸರಿಗೆ ಮಾಹಿತಿ ನೀಡಿದ ಬಗ್ಗೆ ನನ್ನಲ್ಲಿ ದಾಖಲೆಗಳು ಇಲ್ಲ ಎಂದರೆ ಸರಿ. ಹಲ್ಲೆ ಹಾಗೂ ರಸ್ತೆ ಅಪಘಾತ ಹೊರತುಪಡಿಸಿ ಒಬ್ಬ ವ್ಯಕ್ತಿ ಸ್ವಂತಕ್ಕೆ ಬಿದ್ದು ತಲೆಗೆ ಬಲವಾದ ಗಾಯ ಮಾಡಿಕೊಂಡಲ್ಲಿ ನಾವು ಅವರ ಸಂಬಂಧಿಕರಿಂದ ಆ ಕುರಿತು ಬರವಣಿಗೆಯಲ್ಲಿ ಹೇಳಿಕೆ ಪಡೆದುಕೊಳ್ಳುತ್ತೇವೆ. ಇಂತಹ ಪ್ರಕರಣಗಳಲ್ಲಿ ನಾವು ಎಮ್‌ಎಲ್‌ಸಿ ಮಾಡುವುದಿಲ್ಲ ಮತ್ತು ನಿಲ್ ಎಮ್‌ಎಲ್‌ಸಿ ಅಂತಾ ಬರೆದು ಕಳುಹಿಸುತ್ತೇವೆ. ನಿಪಿ-19 ರಲ್ಲಿ ನಿಲ್ ಎಮ್‌ಎಲ್ ಸಿ ಅಂತಾ ಬರೆಯಲಾಗಿರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).